ವಿಲೇಜ್ ಅಕೌಟೆಂಟ್ ಒಬ್ಬನನ್ನು ಮನೆಗೆ ಹೇಳಿಕಳುಹಿಸಿದ್ದೆ. ಅದೇ ಸಮಯದಲ್ಲಿ ಡಿ.ಸಿ. ಸಾಹೇಬರು ನನಗೆ ಹೇಳಿಕಳುಹಿಸಿದ್ದು. ಒಂದೇ ವಾರದಲ್ಲಿ ಹೂವಿನಸರ ಎತ್ತಿದ್ದಂತೆ ಶೀಲಳ ಮದುವೆಯ ನಿಷ್ಕರ್ಷೆ ಮುಗಿದಿತ್ತು.

ಕೋಳಿಗಳ ಕೂಗು, ಹಕ್ಕಿಗಳ ಚಿಲಿಪಿಲಿ ಆರಂಭವಾದಾಗ ಅಡಿಗೆ ಕೋಣೆಗೆ ಹೋಗಿ ಮಲಗಿದ್ದ ನೀರು ತರುವ ಹುಡುಗರನ್ನು ಏಳಿಸುತ್ತೇನೆ. ಭಟ್ಟರು ಇಡ್ಲಿ, ಚಟ್ನಿಯ ತಯಾರಿಯಲ್ಲಿ ತೊಡಗಿದ್ದಾರೆ. ಅವರನ್ನು ಮಾತನಾಡಿಸಿ ಒಲೆಗೆ ಮತ್ತಷ್ಟು ಸೌದೆಗಳನ್ನು ತಳ್ಳಿ ಕೈಕಾಯಿಸಿಕೊಳ್ಳುತ್ತೇನೆ. ನೀರು ಹುಡುಗರೇ ಗದ್ದಲ ಮಾಡುತ್ತ ಅಡ್ಡೆಗಳನ್ನು ಹೆಗಲಿಗೇರಿಸಿ ಹೊರಟಾಗ ಕತ್ತಲಲ್ಲಿ ಬೆಳಕು ಸುರಿಯುತ್ತಿರುತ್ತದೆ. ಸಿಗರೇಟ್ ಹಚ್ಚಿ ಹೊಗೆಯುಗುಳುತ್ತ ಈಚೆ ಬರುತ್ತೇನೆ. ಮಕ್ಕಳ ಅರೆನಿದ್ದೆಯ ಗಲಾಟೆ. ದನಕರುಗಳ ಕೂಗಾಟ, ನೀರು ತರಲು ಹೊರಟ ಹಳ್ಳಿಗರ ಗದ್ದಲ ಇಡೀ ಹಳ್ಳಿಗೆ ಜೀವ ತುಂಬುತ್ತದೆ.

ಸ್ವಲ್ಪ ಹೊತ್ತಿನಲ್ಲೇ ಮಲಗಿದ್ದ ಮನೆಗೆ ಮದುವೆಯ ಕಳೆ ಏರಿಬಿಡುತ್ತದೆ. ನಾಗಸ್ವರದವರು ಶ್ರುತಿ ಸರಿಮಾಡಿಕೊಳ್ಳುತ್ತ ಒಬ್ಬರ ಮಾತು ಒಬ್ಬರಿಗೆ ಕೇಳದಂತೆ ನೆರವಾಗುತ್ತಾರೆ. 'ರೀ... ಬನ್ರಿ ಇಲ್ಲಿ. ಕಾಶಿಯಾತ್ರೆಗೆ ಸಿದ್ಧವಾಗ್ತಾ ಇದೆ ನೀವು ಇರಬೇಡ್ವೆ– ಬನ್ನಿ' ಭಾಗ್ಯ ಪ್ರತ್ಯಕ್ಷಳಾಗಿ ಧಾವಂತ ಮಾಡುತ್ತಾಳೆ.

'ಆಯ್ತು ಇರೋಣ ಬಿಡು. ಇವಳು ಇದ್ದಾಳೆ ತಾನೆ?' ನಿಟ್ಟುಸಿರು ಬಿಡುತ್ತ ಕೇಳುತ್ತೇನೆ.

'ಶೀಲ ತಾನೆ. ಶೀಲ, ರಾಧ ಇಬ್ರೂವೆ ಗೌರಿ ಪೂಜೆಗೆ ಕೂತಿದಾರೆ... ಬನ್ನಿ' ಅನ್ನುತ್ತ ಒಳಗೆಲ್ಲೋ ಸೇರಿಬಿಡುತ್ತಾಳೆ. ಪಡಸಾಲೆಗೆ ಬಂದಾಗ ಕಣ್ಣುಜ್ಜುತ್ತ ಎದ್ದು ಬರುವ ಮಗ ಕಾಣುತ್ತಾನೆ. ಶೀಲಳ ನಂತರ ಹುಟ್ಟಿದವನು, ಶುದ್ಧ ಪೋಲಿ. ಬೇಜವಾಬ್ದಾರಿ ಹುಡುಗ. ನಾನು ದುಡಿದಿರುವುದನ್ನೆಲ್ಲ ಕಳೆಯಲೆಂದೇ ಹುಟ್ಟಿರುವಂತಿದೆ. 'ಹೆಂಗೆ ದುಡಿತಾರೋ ಹಂಗೆ ಹೋಗುತ್ತೆ– ಅನ್ಯಾಯದ್ದು' ಅನ್ನುವ ಹಿರಿಯರ ಮಾತಿನ ಸತ್ಯ ಜನ್ಮ ತಳೆದು ನನ್ನ ಮಗನಾಗಿ ಬಂದಂತೆ ತೋರುತ್ತದೆ.

'ವಿಶ್ವ, ನಾನು ಕಾಶಿಯಾತ್ರೆ ಶಾಸ್ತ್ರ ಸಂಬಂಧಗಳಲ್ಲಿ ಇರಬೇಕಾಗುತ್ತೆ. ಹೊರಗಡೆ ಹೋಗೋರು– ಬರೋರು ಬಗ್ಗೆ ನಿಗಾ ಇರ್ಲಿ ಕಣೋ... ಹಂಗೆ ಶೀಲಳ ಕಡೆ ಕಣ್ಣಿಟ್ಟಿರು' ಅವನ ಬಳಿ ಹೋಗಿ ಪಿಸುಗುಟ್ಟುತ್ತೇನೆ.

'ಸರಿ ನೀನು ಹೋಗಣ್ಣ. ನಿನಗದೇ ಧ್ಯಾನ' ಎಂದ ಅವನು ಪರಪರನೆ ಬೋಳುತಲೆಯನ್ನು ಕೆರೆಯುತ್ತ ಬಾಗಿಲ ಕಡೆ ಹೋಗಿ ಸಿಗರೇಟ್ ಹಚ್ಚುತ್ತಾನೆ. ಶೀಲಳ ಗೆಳತಿ ಅಲಂಕಾರಭೂಷಿತಳಾಗಿ ಎದುರಾಗುತ್ತಾಳೆ. 'ಅಮ್ಮಾ ವಸಂತ, ನಿನ್ನ ಸ್ನೇಹಿತೆ ನಗು ನಗ್ತಾ ಇದಾಳೇನಮ್ಮ?' ಎಂದು ದೀನನಾಗಿ ವಸಂತಳನ್ನು ವಿಚಾರಿಸುತ್ತೇನೆ...

'ಏನೋ, ಒಂದೂ ಅರ್ಥವಾಗ್ತಾ ಇಲ್ಲ ಕಣ್ರಿ... ಅತ್ತು ರಂಪಮಾಡದೆ ಇರೋದೇ ನಮ್ಮ ಪುಣ್ಯ' ಅನ್ನುತ್ತಾಳೆ. 'ಅಳೋ ಅಂತ ಹೇಡಿ ಅಲ್ಲ ಕಣೆ ಅವಳು. ಮನಸ್ಸಿಗೆ ಸರಿಕಂಡಂತೆ ನಡೆಯೋಳು'–ಅನ್ನುತ್ತಾಳೆ ಹಿಂದೆಯೇ ಬಂದ ಪದ್ಮ, ಶೀಲಳ ಮತ್ತೊಬ್ಬ ಪ್ರಾಣಸ್ನೇಹಿತೆ. ಪದ್ಮಳ ಮಾತು ನನ್ನನ್ನು ಅಧೀರನನ್ನಾಗಿಸುತ್ತದೆ.

'ಪತ್ರಿಕೆಯೋನ ಬಗ್ಗೆಯೇ ನನಗೆ ಹೆದರಿಕೇನಮ್ಮ' ಎಷ್ಟೇ ತಡೆಹಿಡಿರೂ ಮನದಲ್ಲಿದ್ದದ್ದು ಹೊರಬಂದುಬಿಡುತ್ತದೆ. 'ಅಯ್ಯೋ, ಅವನ ಪತ್ರಿಕೆ ಇಲ್ಲಿವರೆಗೂ ಬರೋದೇ ಇಲ್ಲ' ಕುಲುಕುಲು ನಗುತ್ತ ಹೋಗಿ ಬಿಡುತ್ತಾರೆ, ಹುಡುಗಿಯರು. ಅವರಿಗೆ ಮದುವೆ ಸಂಭ್ರಮ. ಅವನ ಪತ್ರಿಕೆಯೇನೋ ಬರುವುದಿಲ್ಲ– ಅವನು ಬಂದರೆ ಗಾಯತ್ರಿ ಜಪಿಸುತ್ತೇನೆ. ಯಾರೋ